

بسم اللهِ الرّحمٰن الرّحيم

# ವಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24-01-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರ‌ತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರ‌ತ್ ಪೈಗಂಬರ್(ಸ)ರ ಕಾಲದ ದಂಡಯಾತ್ರೆಗಳ ಪ್ರಸ್ತಾಪ ನಡೆಯುತ್ತಿತ್ತು. ಇಂದು ಈ ಸಂಬಂಧವಾಗಿ ಮೊದಲು ಕುರ್‌ಝ್ ಬಿನ್ ಜಾಬಿರ್(ರ)ರ ಕಾರ್ಯಾಚರಣೆಯ ಬಗ್ಗೆ ಪ್ರಸ್ತಾಪಿಸುತ್ತೇನೆ.

ಈ ದಂಡಯಾತ್ರೆ ಹಿಜರೀ 6, ಶವ್ವಾಲ್ ಮಾಸದಲ್ಲಿ ಉರೈನದ ಕಡೆಗೆ ಆಗಿತ್ತು. ಕೆಲವರ ಪ್ರಕಾರ ಈ ದಂಡಯಾತ್ರೆ ಸಈದ್ ಬಿನ್ ಝೈದ್(ರ)ರದ್ದಾಗಿತ್ತು. ಆದರೆ ಹೆಚ್ಚಿನವರ ಹೇಳಿಕೆ ಪ್ರಕಾರ ಈ ದಂಡಯಾತ್ರೆ ಕುರ್‌ಝ್ ಬಿನ್ ಜಾಬಿರ್‌ರದ್ದು ಆಗಿತ್ತು. ಈ ದಂಡಯಾತ್ರೆ ಜರೀರ್ ಬಿನ್ ಅಬ್ದುಲ್ಲಾಹ್‌ರದ್ದಾಗಿತ್ತು ಎಂದೂ ಒಂದು ಹೇಳಿಕೆಯಿದೆ. ಆದರೆ ಈ ಹೇಳಿಕೆ ಸರಿಯಲ್ಲವೆಂದೂ ಹೇಳಲಾಗಿದೆ.

ಈ ಕಾರ್ಯಾಚರಣೆಯ ವಿವರಣೆ ಹೀಗಿದೆ: ಉಕಲ್ ಮತ್ತು ಉರೈನ ಗೋತ್ರಗಳ ಸುಮಾರು ಎಂಟು ಜನರು ಹಝ್ರ‌ತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಅವರು ರೋಗಿಗಳು ಕೂಡ ಆದರು. ಅವರು ಹೇಳಿದರು: ನಮಗೆ ಅಭಯ ನೀಡಿರಿ ಮತ್ತು ನಮಗೆ ಆಹಾರ ನೀಡಿರಿ. ಅವರು ಮಸ್ಜಿದ್ ನಬವಿಯಲ್ಲಿ ತಂಗಿದರು ಮತ್ತು ಬೇಗನೇ ಆರೋಗ್ಯವಂತರಾದರು. ಆದರೆ ಅವರಿಗೆ ಮದೀನದ ಹವಾಮಾನ ಹಿಡಿಸಲಿಲ್ಲ. ಆದ್ದರಿಂದ ಹಝ್ರ‌ತ್ ಪೈಗಂಬರ್(ಸ)ರ ಅನುಮತಿ ಮತ್ತು ಆದೇಶದಂತೆ ಅವರು ಒಂಟೆಗಳು ಮೇಯುವ ಪ್ರದೇಶಕ್ಕೆ ಹೋದರು. ಹಝ್ರ‌ತ್ ಪೈಗಂಬರ್(ಸ)ರ ಈ ಕಾರುಣ್ಯದ ವರ್ತನೆಯಿದ್ದು ಕೂಡ ಆ ಜನರು ಮೇಯುಗಾವಲು ಪ್ರದೇಶದ ಒಂಟೆಗಳ ಬಳಿಗೆ ಹೋದ ನಂತರ ಸತ್ಯನಿಷೇಧಿಗಳಾದರು ಮತ್ತು ಒಂಟೆಗಳನ್ನು ಕೊಂಡುಹೋದರು. ಎಂದರೆ ಆರೋಗ್ಯವಂತರಾದ ನಂತರ ಅವರು ಹಝ್ರ‌ತ್ ಪೈಗಂಬರ್(ಸ)ರನ್ನು ಮೋಸ ಮಾಡಿದರು. ಹಝ್ರ‌ತ್ ಪೈಗಂಬರ್(ಸ) ಸ್ವತಂತ್ರಗೊಳಿಸಿದ ಗುಲಾಮ ಯಸಾರ್ ಮತ್ತು ಆತನ ಕೆಲವು ಸಹಚರರು ಅವರನ್ನು ಹಿಂಬಾಲಿಸಿದರು. ಆಗ ಅವರು ಮುಸ್ಲಿಮರೊಡನೆ ಹೋರಾಡಿದರು ಮತ್ತು ಅತ್ಯಂತ ನಿರ್ದಯತೆಯಿಂದ ಯಸಾರಿನ ಕೈ ಕಾಲುಗಳನ್ನು ಮುರಿದರು ಮತ್ತು ಅವರ ಕಣ್ಣುಗಳಲ್ಲೂ ಬಾಯಿಯಲ್ಲೂ ಮುಳ್ಳುಗಳನ್ನು ತುರುಕಿಸಿ ಅವರನ್ನು ಶಹೀದ್ ಮಾಡಿದರು. ಅನಂತರ ಅವರು ಒಂಟೆಗಳನ್ನು ಪರಿಪಾಲಿಸುವವರ ಬಳಿಗೆ ಬಂದು ಅವರೆಲ್ಲರನ್ನೂ ವಧಿಸಿದರು. ಬಚಾವಾದ ಒಬ್ಬ ವ್ಯಕ್ತಿ ಹಝ್ರ‌ತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಅವರು ನನ್ನ ಸಹಚರರನ್ನು ವಧಿಸಿದ್ದಾರೆ ಮತ್ತು ಒಂಟೆಗಳನ್ನು ಕೊಂಡು ಹೋಗಿದ್ದಾರೆ. ಇದನ್ನು ತಿಳಿದಾಗ ಹಝ್ರ‌ತ್ ಪೈಗಂಬರ್(ಸ) ಇಪ್ಪತ್ತು ವ್ಯಕ್ತಿಗಳ ಒಂದು ತಂಡವನ್ನು ಕಳುಹಿಸಿದರು. ಅದು ಹಝ್ರ‌ತ್ ಪೈಗಂಬರ್(ಸ)ರ ದುಆದ ಮೂಲಕ ಅಂದೇ ಅಥವಾ ಮರುದಿನ ಆ ಜನರನ್ನು ಬಂಧಿಸಿ ಅವರನ್ನು ಹಝ್ರ‌ತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರುಪಡಿಸಿತು.

ಅನೇಕ ವರದಿಗಳ ಪ್ರಕಾರ ಹಝ್ರ‌ತ್ ಪೈಗಂಬರ್(ಸ) ಆ ಜನರೊಡನೆ ಅವರು ಮುಸ್ಲಿಮ್ ಕುರುಬರೊಡನೆ ವರ್ತಿಸಿದ ರೀತಿಯಲ್ಲೇ ಶಿಕ್ಷಿಸಿದ್ದರು ಎಂದಿದೆ. ಅದಕ್ಕೆ ಕಾರಣವೇನೆಂದರೆ, ಅಂದಿನ ವರೆಗೂ ಮುಖ ವಿರೂಪಗೊಳಿಸುವುದನ್ನು ನಿಷೇಧಿಸುವ ಆದೇಶ ಇಸ್ಲಾಮಿನಲ್ಲಿ ಅವತೀರ್ಣವಾಗಿರಲಿಲ್ಲ. ಆದರೆ ಈ ನಿಷೇಧ ಅವತೀರ್ಣಗೊಂಡ ನಂತರ ಹಝ್ರ‌ತ್ ಪೈಗಂಬರ್(ಸ) ಯಾವುದೇ ಸೇನೆಯನ್ನು ಕಳುಹಿಸುವಾಗಲೂ ದೇಹವನ್ನು ವಿರೂಪಗೊಳಿಸಬಾರದು ಎಂದೂ ದಾನಧರ್ಮವನ್ನು ಮಾಡಬೇಕು ಎಂದೂ ಹೇಳುತ್ತಿದ್ದರು.

ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಮುಸ್ಲಿಮರಿಗಾಗಿ ಆ ದಿನಗಳು ಅತ್ಯಂತ ಅಪಾಯಕಾರಿಯಾಗಿದ್ದುವು. ಏಕೆಂದರೆ ಖುರೈಶ್ ಮತ್ತು ಯಹೂದಿಯರ ಪ್ರಚೋದನೆಯಿಂದ ಪೂರ್ತಿ ದೇಶ ಅವರ ಹಗೆಯ ಬೆಂಕಿಯಿಂದ ಹೊತ್ತಿಕೊಂಡಿತ್ತು. ಮದೀನದ ಮೇಲೆ ವ್ಯವಸ್ಥಿತವಾದ ದಾಳಿ ನಡೆಸುವುದಕ್ಕೆ ಬದಲಾಗಿ ಮುಸ್ಲಿಮರನ್ನು ಮೋಸ ಮಾಡಿ ಹಾನಿಗೊಳಿಸಬೇಕೆಂದು ಹೊಸ ಕಾರ್ಯನೀತಿಯ ಆಧಾರದಲ್ಲಿ ಅವರು ತೀರ್ಮಾನಿಸಿದ್ದರು.

ಈ ದುಷ್ಟರಿಗೆ ಶಿಕ್ಷೆ ನೀಡಿದ ಬಗ್ಗೆ ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಈ ವಿಷಯದಲ್ಲಿ ಕ್ರೂರತೆಯ ಆರಂಭ ಸತ್ಯನಿಷೇಧಿಗಳ ಕಡೆಯಿಂದಾಗಿತ್ತು. ಅದಲ್ಲದೇ ಈ ತೀರ್ಪನ್ನು ಮೂಸಾ(ಅ)ರ ಶರೀಅತ್ ಪ್ರಕಾರ ಮಾಡಲಾಗಿತ್ತು. ಆದಾಗ್ಯೂ ಇಸ್ಲಾಂ ಈ ರೀತಿಯ ಶಿಕ್ಷೆಯನ್ನು ಸ್ಥಾಯಿಗೊಳಿಸಲಿಲ್ಲ. ಅನಂತರ ಈ ವಿಧಾನವನ್ನು ನಿಷೇಧಿಸಲಾಯಿತು. ವಿಲಿಯಮ್ ಮ್ಯೂರ್ ಸಮೇತ ಕೆಲವು ಪಾಶ್ಚಿಮಾತ್ಯ ಸಂಶೋಧಕರು ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಎಂದಿನಂತೆ ಆಕ್ಷೇಪಿಸಿದ್ದಾರೆ. ಈ ವಿಷಯದಲ್ಲಿ ಇಸ್ಲಾಮಿನ ಸೆರಗು ಪೂರ್ಣವಾಗಿಯೂ ಪರಿಶುದ್ಧವಾಗಿ ತೋರುತ್ತದೆ. ಏಕೆಂದರೆ, ಸತ್ಯದಲ್ಲಿ ಈ ತೀರ್ಪು ಇಸ್ಲಾಮಿನದ್ದು ಆಗಿರಲಿಲ್ಲ. ಬದಲಿಗೆ ಹಝ್ರ‌ತ್ ಮೂಸಾ(ಅ)ರದ್ದು ಆಗಿತ್ತು. ಅವರ ನಿಯಮಸಂಹಿತೆಯನ್ನು ಹಝ್ರ‌ತ್ ಈಸಾ(ಅ) ರದ್ದುಗೊಳಿಸಿರಲಿಲ್ಲ. ಬದಲಿಗೆ ಅದನ್ನು ಮುಂದುವರಿಸಿದ್ದರು.

ಇನ್ನು ನಮ್ಮ ಆಕ್ಷೇಪಕರ ಮುಂದೆ ಹಝ್ರತ್ ಈಸಾ ಮಸೀಹರ ಹೇಳಿಕೆಯಾದ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನೂ ತೋರಿಸು ಎಂಬುದು ಇರುವುದಾದರೆ, ಪ್ರಶ್ನೆಯೇನೆಂದರೆ, ಇದು ವಿವೇಕಿಗಳಿಗೆ ಪಾಲಿಸಲು ಸಾಧ್ಯವಿರುವ ಉಪದೇಶವೇ? ಇಂದಿನ ತನಕ ಯಾವನಾದರೂ ಕ್ರೈಸ್ತ ಪುರುಷ ಅಥವಾ ಮಹಿಳೆ ಅಥವಾ ಯಾವುದಾದರೂ ಕ್ರೈಸ್ತ ಪಂಗಡ ಅಥವಾ ಸರ್ಕಾರ ಈ ಬೋಧನೆಯನ್ನು ಪಾಲಿಸಿದೆಯೇ? ಭಾಷಣಪೀಠವನ್ನೇರಿ ಉಪದೇಶಿಸಲು ಇದು ನಿಸ್ಸಂದೇಹವಾಗಿಯೂ ಒಂದು ಉತ್ತಮ ಬೋಧನೆಯಾಗಿದೆ. ಆದರೆ ಪ್ರಾಯೋಗಿಕ ಜಗತ್ತಿನಲ್ಲಿ ಈ ಉಪದೇಶಕ್ಕೆ ಯಾವುದೇ ಬೆಲೆಯಿಲ್ಲ. ಇಸ್ಲಾಂ ಹೆಚ್ಚು ಯಾ ಕಮ್ಮಿಯ ಮಾರ್ಗವನ್ನು ಬಿಟ್ಟು ಮಧ್ಯಮ ಮಾರ್ಗದ ಬೋಧನೆಯನ್ನು ನೀಡುತ್ತದೆ. ಅದು ಲೋಕದಲ್ಲಿ ನಿಜವಾದ ಶಾಂತಿಗೆ ಬುನಾದಿಯಾಗಿದೆ. ಎಂದರೆ ಪ್ರತಿಯೊಂದು ಅಪರಾಧಕ್ಕೆ ಇರುವ ಶಿಕ್ಷೆ ಅದಕ್ಕನುಗುಣವಾಗಿ ಮತ್ತು ಅದರ ತೀವ್ರತೆಯ ಪ್ರಕಾರ ಆಗಿರಬೇಕು. ಆದರೆ ಕ್ಷಮಿಸುವುದರಿಂದ ಅಥವಾ ಸೌಮ್ಯವಾಗಿ ವರ್ತಿಸುವುದರಿಂದ ಸುಧಾರಣೆ ಸಾಧ್ಯವಿದೆ ಎಂದಾದರೆ ಕ್ಷಮಿಸುವುದು ಅಥವಾ ಸೌಮ್ಯತೆ ತೋರಿಸುವುದು ಉತ್ತಮ. ಅಂತಹ ವ್ಯಕ್ತಿ ಅಲ್ಲಾಹನ ಬಳಿ ಉತ್ತಮ ಪ್ರತಿಫಲಕ್ಕೆ ಹಕ್ಕುಗಾರನಾಗುವನು. ಅನುಯೋಜ್ಯವಾದ ಮಿತಿಗಿಂತ ಮೀರಿ ಹೋಗಬಾರದು ಎಂಬ ನಿಬಂಧನೆಯನ್ನು ಇಸ್ಲಾಂ ಇರಿಸಿದೆ ಮತ್ತು ಶರೀರವನ್ನು ವಿರೂಪಗೊಳಿಸುವಂತಹ ಕ್ರೂರ ಕೃತ್ಯಗಳನ್ನು ಪೂರ್ಣವಾಗಿಯೂ ನಿಷೇಧಿಸಲಾಗಿದೆ. ಅದಕ್ಕೆ ವಿರುದ್ಧವಾಗಿ ಕ್ರೈಸ್ತರಿಗೆ ಹಝ್ರತ್ ಈಸಾ ಮಸೀಹರ ಈ ತೋರಿಕೆಯ ಬೋಧನೆಗಳಿದ್ದೂ ಅವರು ಶತ್ರುಗಳೊಡನೆ ವರ್ತಿಸಿದ ರೀತಿ ಮತ್ತು ಯುದ್ಧಗಳಲ್ಲಿ ಮಾಡುತ್ತಿರುವುದು ಲೋಕದ ಮುಂದೆ ತೆರೆದ ಪುಸ್ತಕದಂತೆ ಇದೆ. ಅವುಗಳನ್ನು ಪುನಃ ಹೇಳುವ ಅಗತ್ಯವಿಲ್ಲ. ಇವರು ಏನನ್ನೆಲ್ಲ ಮಾಡಿಲ್ಲ?

ಈಗ ಧೀಖರದ್ ಎಂದು ಕರೆಯಲ್ಪಡುವ ಒಂದು ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತೇನೆ. ಇದು ಯಾವಾಗ ನಡೆದಿತ್ತು ಎಂಬುದರ ಬಗ್ಗೆ ಚರಿತ್ರೆಗಾರರ ಮತ್ತು ಹದೀಸ್ ಪಂಡಿತರ ಮಧ್ಯೆ ಭಿನ್ನಾಭಿಪ್ರಾಯವಿದೆ. ಇದು ಹುದೈಬಿಯಾ ಸಂಧಿಯ ನಂತರ ಮತ್ತು ಖೈಬರ್ ಯುದ್ಧಕ್ಕೆ ಮುಂಚೆ ನಡೆದಿತ್ತು ಎಂದು ಹದೀಸ್ ಪಂಡಿತರು ಹೇಳುತ್ತಾರೆ. ಆದರೆ ಅದು ಲಹ್‌ಯಾನ್ ಯುದ್ಧದ ನಂತರ ನಡೆದಿತ್ತು ಎಂದು ಚರಿತ್ರೆಗಾರರು ಹೇಳುತ್ತಾರೆ. ಇದು ಖೈಬರ್ ಯುದ್ಧಕ್ಕೆ ಮೂರು ದಿನಗಳಿಗೆ ಮುಂಚೆ ನಡೆದಿತ್ತು ಎಂದು ಇಮಾಂ ಬುಖಾರಿ ಮತ್ತು ಇಮಾಂ ಮುಸ್ಲಿಂ ಹೇಳುತ್ತಾರೆ. ಈ ಯುದ್ಧ ಹಿಜರೀ 7, ಮುಹರ್ರಮ್ ಮಾಸದಲ್ಲಿ ನಡೆದಿತ್ತು ಎಂದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ.

ಈ ಯುದ್ಧದ ವಿವರಣೆ ಈ ರೀತಿಯಾಗಿದೆ: ಹಝ್ರತ್ ಪೈಗಂಬರ್(ಸ)ರಿಗೆ ಇಪ್ಪತ್ತು ಹಾಲು ನೀಡುವ ಒಂಟೆಗಳು ಮತ್ತು ಸ್ವಲ್ಪ ಇತರ ಒಂಟೆಗಳಿದ್ದುವು. ಈ ಒಂಟೆಗಳು ಮೇಯುಗಾವಲಲ್ಲಿ ಮೇಯುತ್ತಿದ್ದುವು. ಒಬ್ಬ ಕುರುಬ ಪ್ರತಿದಿನ ಸಂಜೆ ಅದರ ಹಾಲನ್ನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ತರುತ್ತಿದ್ದನು. ಒಂದು ದಿನ ಐನಿಯ ಫಝ್ಝಾರಿ ಬನೂ ಗ಼ತ್‌ಫಾನಿನ ನಲ್ವತ್ತು ಕುದುರೆಸವಾರರ ಜೊತೆಗೆ ಅವುಗಳ ಮೇಲೆ ದಾಳಿ ನಡೆಸಿ ಆ ಒಂಟೆಗಳನ್ನು ಕೊಂಡು ಹೋದರು. ದಾಳಿಯ ವೇಳೆ ಒಂಟೆಗಳನ್ನು ಪರಿಪಾಲಿಸುತ್ತಿದ್ದ ಹಝ್ರತ್ ಅಬೂಧ಼ರ್‌ನ ಪುತ್ರನಾದ ಧ಼ರ್‌ನನ್ನು ಅವರು ವಧಿಸಿದರು ಮತ್ತು ಹಝ್ರತ್ ಅಬೂಧ಼ರ್‌ನ ಪತ್ನಿಯಾದ ಲೈಲಳನ್ನು ಬಂಧಿಸಿ ಕೊಂಡುಹೋದರು.

ಐನಿಯನ ಬಗ್ಗೆ ಹೇಳುವುದಾದರೆ ಆತ ಅಹ್‌ಝ್ಝಾಬ್ ಯುದ್ಧದ ವೇಳೆ ಬನೂಫಝ್ಝಾರ್ ಗೋತ್ರದ ಸರದಾರನಾಗಿದ್ದನು. ಐನಿಯ ಮಕ್ಕಾವಿಜಯದ ನಂತರ ಅಥವಾ ಒಂದು ವರದಿಯ ಪ್ರಕಾರ ಮಕ್ಕಾ ವಿಜಯಕ್ಕೆ ಮುಂಚೆ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದನು. ಆತನು ಹುನೈನ್ ಯುದ್ಧ ಮತ್ತು ತಾಯಿಫ್ ಯುದ್ಧದಲ್ಲೂ ಭಾಗಿಯಾಗಿದ್ದನು. ಬನೂ ತಮೀಮ್ ಗೋತ್ರವನ್ನು ದಮನಿಸಲು ಆತನನ್ನು ಹಝ್ರತ್ ಪೈಗಂಬರ್(ಸ) ಐವತ್ತು ಸವಾರರ ಜೊತೆಗೆ ಕಳುಹಿಸಿದ್ದರು. ಅದರಲ್ಲಿ ಮುಹಾಜಿರ್ ಮತ್ತು ಅನ್ಸಾರ್ ಸಹಾಬಿಯರಾಗಿ ಯಾರೂ ಇದ್ದಿರಲಿಲ್ಲ. ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಆತನು ಧರ್ಮತ್ಯಾಗ ಮಾಡಿದನು. ಅನಂತರ ತುಲೈಹ ಪ್ರವಾದಿತ್ವದ ವಾದವನ್ನು ಮಾಡಿದಾಗ ಆತನೊಡನೆ ಸೇರಿಕೊಂಡನು ಮತ್ತು ತುಲೈಹನ ಕೈಯಲ್ಲಿ ಬೈಅತ್ ಮಾಡಿಕೊಂಡನು. ಈತನನನ್ನು ಬಂಧಿಸಿ ಹಝ್ರತ್ ಅಬೂಬಕರ್(ರ)ರ ಬಳಿಗೆ ತರಲಾದಾಗ ಅವರು ಆತನನ್ನು ಔದಾರ್ಯಪೂರ್ವಕವಾಗಿ ಕ್ಷಮಿಸಿದರು. ಅನಂತರ ಆತನು ಪುನಃ ಇಸ್ಲಾಂ ಸ್ವೀಕಾರ ಮಾಡಿಕೊಂಡನು.

ಇದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಐನಿಯನ ದಾಳಿಗೆ ಮುಂಚೆ ಹಝ್ರತ್ ಅಬೂಧ಼ರ್(ರ) ಹಝ್ರತ್ ಪೈಗಂಬರ್(ಸ)ರಿಂದ ಒಂಟೆಗಳನ್ನು ಮೇಯುಗಾವಲು ಪ್ರದೇಶದ ಕಡೆಗೆ ಕೊಂಡೊಯ್ಯಲು ಅನುಮತಿ ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಶತ್ರುಗಳು ನಿಮ್ಮ ಮೇಲೆ ದಾಳಿ ನಡೆಸಬಹುದು ಎಂಬ ಭಯ ನನಗೆ ಇದೆ. ಏಕೆಂದರೆ ನಾವು ಐನಿಯ ಮತ್ತು ಆತನ ಸಹಚರರಿಂದ ಸುರಕ್ಷಿತರಲ್ಲ. ಆ ಪ್ರದೇಶ ಕೂಡ ಆ ದಿಕ್ಕಿನಲ್ಲಿದೆ. ಹಝ್ರತ್ ಅಬೂಧ಼ರ್(ರ) ಒತ್ತಾಯ ಮಾಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಶತ್ರುಗಳು ನಿನ್ನ ಪುತ್ರನನ್ನು ವಧಿಸಬಹುದು ಮತ್ತು ನಿನ್ನ ಪತ್ನಿಯನ್ನು ಬಂಧಿಸಬಹುದು ಎಂಬ ಭಯ ನನಗಿದೆ. ಅನಂತರ ನೀನು ಒಂದು ಬೆತ್ತದ ಆಸರೆಯಿಂದ ಬರುವಿಯಾ. ಹಝ್ರತ್ ಅಬೂಧ಼ರ್ ಹೇಳುತ್ತಾರೆ: ನನ್ನ ಕುರಿತು ನನಗೆ ಆಶ್ಚರ್ಯವಾಗುತ್ತದೆ. ನಿನ್ನ ಬಗ್ಗೆ ನನಗೆ ಭಯವಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರೂ ಕೂಡ ನಾನು ಒತ್ತಾಯ ಮಾಡುತ್ತಲೇ ಇದ್ದೆ. ಅನಂತರ ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಹೇಳಿದಂತೆಯೇ ಆಯಿತು. ನಾನು ಮನೆಯಲ್ಲಿ ಇದ್ದೆ ಮತ್ತು ಹಝ್ರತ್ ಪೈಗಂಬರ್(ಸ)ರ ಒಂಟೆಗಳನ್ನು ಕೊಟ್ಟಿಗೆಗೆ ಮರಳಿ ತರಲಾಗಿದ್ದುವು. ಅವುಗಳಿಗೆ

ಆಹಾರ ಪಾನೀಯಗಳನ್ನು ನೀಡಲಾಗಿತ್ತು. ಅವುಗಳ ಹಾಲುಗಳನ್ನು ಕರೆಯಲಾಗಿತ್ತು. ಅನಂತರ ನಾವು ನಿದ್ದೆಹೋದೆವು. ರಾತ್ರಿ ಸಮಯದಲ್ಲಿ ಐನಿಯ ನಲ್ವತ್ತು ಸವಾರರ ಜೊತೆಗೆ ನಮ್ಮ ಮೇಲೆ ಆಕ್ರಮಣ ನಡೆಸಿದನು. ಅವರು ಅಲ್ಲಿ ನಿಂತು ಕೂಗಿ ಕರೆದಾಗ ನನ್ನ ಮಗ ಹೊರಗೆ ಬಂದನು. ಅವನನ್ನು ಅವರು ಕೊಂದುಬಿಟ್ಟರು.

ಈ ಸಂಬಂಧವಾಗಿ ಶತ್ರುಗಳನ್ನು ಹಝ್ರತ್ ಸಲ್ಮ ಬಿನ್ ಅಕೂಅ್ ಹಿಂಬಾಲಿಸಲು ಹೋದ ಬಗ್ಗೆಯೂ ಪ್ರಸ್ತಾಪ ಬರುತ್ತದೆ. ಒಂಟೆಗಳನ್ನು ಕೊಂಡುಹೋದವರನ್ನು ಸಲ್ಮ ಬಿನ್ ಅಕೂಅ್ ಹಿಂಬಾಲಿಸಿದರು ಮತ್ತು ಅವರ ಮೇಲೆ ಶಕ್ತವಾದ ದಾಳಿ ನಡೆಸಿದರು ಹಾಗೂ ಅನೇಕ ಒಂಟೆಗಳನ್ನು ಮರಳಿ ಪಡೆಯುವುದಲ್ಲಿ ಯಶಸ್ಸಾದರು. ಈ ಎಲ್ಲಾ ಸಂಗತಿಗಳ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾದಾಗ ಅವರು ಘೋಷಣೆ ಮಾಡಿಸಿದರು. ಈ ಘೋಷಣೆ ಪ್ರಕಾರ ಶ್ರೇಷ್ಠ ಸಹಾಬಿಯರು ಹಾಜರಾದರು. ಹಝ್ರತ್ ಪೈಗಂಬರ್(ಸ) ಸಅದ್ ಬಿನ್ ಝೈದ್(ರ)ರನ್ನು ಅಮೀರ್ ಆಗಿ ನೇಮಿಸಿದರು ಮತ್ತು ಅವರನ್ನು ಹಿಂಬಾಲಿಸಲು ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ಸ್ವತಃ ಐನ್ನೂರು ಅಥವಾ ಏಳು ನೂರು ಸಹಾಬಿಯರ ಜೊತೆಗೆ ಹೊರಟರು.

ಹಝ್ರತ್ ಪೈಗಂಬರ್(ಸ) ಮಿಖ್ದಾದ್ ಬಿನ್ ಅಸ್ವದ್(ರ)ರ ಈಟಿಯ ಮೇಲೆ ಧ್ವಜವನ್ನು ಕಟ್ಟಿದರು. ಈ ಯುದ್ಧದಲ್ಲಿ ನಡೆದ ಒಂದು ಘಟನೆಯ ಬಗ್ಗೆ ಇಬ್ನು ಇಸ್‌ಹಾಖ್ ಹೀಗೆ ಹೇಳುತ್ತಾರೆ – ಹಝ್ರತ್ ಪೈಗಂಬರ್(ಸ) ಕೇಳಿದರು: ಎಲೈ ಅಬೂ ಅಯಾಶ್, ಶತ್ರುಗಳನ್ನು ಹಿಡಿಗೂಡಬಲ್ಲ ನಿನಗಿಂತ ಉತ್ತಮನಾದ ಸವಾರನಿಗೆ ನಿನ್ನ ಕುದುರೆಯನ್ನು ಕೊಡುವುದಿಲ್ಲವೇ? ಹಝ್ರತ್ ಅಬೂ ಅಯಾಶ್(ರ) ಹೇಳಿದರು: ಹೇ ಅಲ್ಲಾಹನ ಸಂದೇಶವಾಹಕರೇ, ನಾನು ಅತ್ಯುತ್ತಮ ಸವಾರನಾಗಿರುವೆನು. ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿಕೊಂಡು ನಾನು ಕುದುರೆಯನ್ನು ಓಡಿಸಿ ಹೊರಟೆನು. ಆದರೆ ಐವತ್ತು ಅಡಿಗಳಷ್ಟು ದೂರಕ್ಕೆ ಹೋಗುವಷ್ಟರಲ್ಲಿ ಕುದುರೆ ನನ್ನನ್ನು ಕೆಳಗೆ ಬೀಳಿಸಿತು. ನನಗೆ ಆಶ್ಚರ್ಯವಾಯಿತು. ಏಕೆಂದರೆ ಕುದುರೆಯನ್ನು ನಿನಗಿಂತ ಉತ್ತಮ ಸವಾರನಿಗೆ ಕೊಡು ಎಂದು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರೂ ಕೂಡ ನಾನೇ ಉತ್ತಮ ಸವಾರನೆಂದು ನಾನು ಹೇಳುತ್ತಿದ್ದೆ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಅಯಾಶ್(ರ)ರ ಕುದುರೆಯನ್ನು ಹಝ್ರತ್ ಮುಆಧ್ ಬಿನ್ ಮಾಯಿಸ್(ರ)ರಿಗೆ ಕೊಟ್ಟರು. ಈ ಯುದ್ಧದಲ್ಲಿ ಸಹಾಬಿಯರು ಬಹಳ ಶೂರತೆಯಿಂದ ಮತ್ತು ತ್ಯಾಗಮನೋಭಾವದಿಂದ ಯುದ್ಧ ಮಾಡಿದರು. ಕೆಲವು ಸಹಾಬಿಯರು ಬಹಳ ಧೈರ್ಯವನ್ನು ತೋರಿಸುತ್ತಾ ಹುತಾತ್ಮರಾದರು.

(ಈ ವಿಷಯ ಮುಂದುವರೆಯುವುದು ಎಂದು ಹುಝೂರ್ ಖುತ್ಬದ ಕೊನೆಯಲ್ಲಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*(atba)**

At, ***'Masjid Mubarak'***, *Islamabad*, *Tilford*, U.K. On 24-01-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon